ಆಸಂಪಾನಿನ ಬಳಿನೆಲೆ, ಕೈಕಂಬ ಸಂಜಿಬಾಳ್ತಿಲಕೊಂಬಾರು, ಎಂಬ ಗ್ರಾಮೀಣ ಗುಡ್ಡಗಾಡು ಪ್ರದೇಶದ ರೈತರಿಗೆ ಆಗುತ್ತಿರುವ ಅನ್ಯಾಯವನ್ನು ಹೋಗಲಾಡಿಸಲು ಮತ್ತು ಕಡಬದಿಂದ ೩೦ ಕಿ.ಮೀ. ದೂರದಲ್ಲಿ ಬರುವ ಪುರಾತನ ಪುಣ್ಯ ಕ್ಷೇತ್ರವಾದ ಕಾಕ್ಕೆ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಬರುವ ಯಾತ್ರಿಕರು, ಪಡುತ್ತಿರುವ ವಿದ್ಯುತ್ ಅಭಾವದ ತೊಂದರೆಯನ್ನು ಹೋಗಲಾಡಿಸಿದಂತಾಗುವುದು. ಕೂಡಲೇ ಕಡಬಕ್ಕೆ ವಿದ್ಯುತ್ ಸೆಕ್ಷನ್ ಕಚೇರಿಯನ್ನು ತೆರೆಯುವಂತೆ ಸರಕಾರವನ್ನು ಒತ್ತಾಯಿಸ ಬಯಸುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ ಸುಳ್ಯ ವಿಧಾನ ಸಭಾ ಕ್ಷೇತ್ರದ ಪುತ್ತೂರು ತಾಲ್ಲೂಕಿನ ಕಡಬಾ ಎಂಬಲ್ಲಿ ಹಾಲಿ ಲೆಕ್ಕರಹಿತ ಶಾಖಾ ಕಚೇರಿ ಇದೆ. ಇಲ್ಲಿ ಹಾಲಿ ತಿಂಗಳಿಗೊಂದು ಸಲ ಪುತ್ತೂರಿನಿಂದ ಬಂದು ಹಣ ಪಡೆಯುವ ವ್ಯವಸ್ಥೆ ಇದೆ. ಇದಲ್ಲದೆ ಪುತ್ತೂರು ಮತ್ತು ಉಪ್ಪಿನಂಗಡಿಯಲ್ಲಿನ ಸಿಂಡಿಕೇಟ್ ಬ್ಯಾಂಕ್‌ಗಳಲ್ಲೂ ಹಣ ಪಾವತಿ ಮಾಡುವ ವ್ಯವಸ್ಥೆ ಇದೆ. ಈ ವ್ಯವಸ್ಥೆ ಸಮರ್ಪಕವಾಗಿ ನಡೆಯುತ್ತಿದೆ ಗ್ರಾಹಕರಿಗೆ ಹೆಚ್ಚಿನ ಅನುಕೂಲ ಕಲ್ಪಿಸುವ ಅವಶ್ಯಕತೆ ಕಂಡುಬಂದಲ್ಲಿ ಹೆಚ್ಚು ದಿನಗಳು ಹಣ ಸ್ವೀಕರಿಸುವ ವ್ಯವಸ್ಥೆ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ.

ಗ್ರಾಹಕರಿಗೆ ಹೆಚ್ಚಿನ ಸೌಲಭ್ಯ ಕಲ್ಪಿಸಲು ಮಂಡಲಿಯು ರಾಜ್ಯದಲ್ಲಿನ ಹಣಪಾವತಿ ಕೇಂದ್ರಗಳನ್ನು ಪುನರ್ ವ್ಯವಸ್ಥೆ ಮಾಡಲಾಗುತ್ತಿದೆ. ಆಗ ಈ ಸಮಸ್ಯೆ ಸುಧಾರಣೆಯಾಗುವ ನಿರೀಕ್ಷೆ ಇದೆ. ಮತ್ತು ಈ ಕೇಂದ್ರಗಳು ಸಂಪೂರ್ಣವಾಗಿ ಪುನರ್ ವ್ಯವಸ್ಥೆ ಮಾಡಿ ಇದುವರೆಲ್ಲಿಲ್ಲಿ ಅವಶ್ಯಕತೆ ಇದೆ ಸಬ್ ಸೆಕ್ಷನ್ ಮಂತ್ತು ಕಲೆಕ್ಷನ್ ಸೆಂಟರ್‌ಗಳನ್ನು ಮಾಡತೆಕ್ಕೆಂಥ ಒಂದು ಯೋಜನೆ ಇದೆ. ಈ ಯೋಜನೆಯ ಬಗ್ಗೆ ಸಂಪೂರ್ಣವಾದ ಕಾರ್ಯಕ್ರಮ ತೆಗೆದುಕೊಂಡಾಗ ಅನುಕೂಲವಾಗುತ್ತದೆಂದು ಹೇಳುತ್ತೇನೆ.

೧೩) ಮಂಗಳೂರು ವಿಶ್ವವಿದ್ಯಾನಿಲಯದ ಅಂತಿಮ ಬಿ.ಕಾಂ. ಇನ್‌ಕಂಟ್ಯಾಕ್ಸ್ ಮತ್ತು ಕಾಸ್ಟ್ ಅಕೌಂಟ್ಸ್ ಪ್ರಶ್ನೆ ಪತ್ರಿಕೆಗಳು ಬಹಿರಂಗವಾಗಿರುವುದು.

ಶ್ರೀ ರಾಮನಾಥ್ ರೈ (ಬಂಟ್ವಾಳ).—ಮಾನ್ಯ ಸಭಾಧ್ಯಕ್ಷರೆ ಮಂಗಳೂರು ವಿಶ್ವವಿದ್ಯಾಲಯದ ಅಂತಿಮ ಬಿ.ಕಾಂ. ಇನ್‌ಕಂಟ್ಯಾಕ್ಸ್ ಅಂಡ್ ಕಾಸ್ಟ್ ಅಕೌಂಟ್ಸ್ ಪ್ರಶ್ನೆ ಪತ್ರಿಕೆಗಳು ಪರೀಕ್ಷೆ ನಡೆಯುವ ಮೊದಲೇ ಖಾಸಗೀ ಕಾಲೇಜೊಂದರಲ್ಲಿ ಬಹಿರಂಗಗೊಂಡಿರುತ್ತದೆ. ಈ ಪಠ್ಯ ವಿಷಯದಲ್ಲಿ ಆ ಕಾಲೇಜಿನ ವಿದ್ಯಾರ್ಥಿಗಳು ಶೇಕಡಾ ೬೦ ಅಂಕಗಳನ್ನು ಗಳಿಸಿರುತ್ತಾರೆ. ಆದರೆ ಈ ಪರೀಕ್ಷೆಯಲ್ಲಿ ವಿಶ್ವವಿದ್ಯಾಲಯದಲ್ಲಿ ಒಟ್ಟು ಶೇಕಡಾ ೪೧ ಮಂದಿ ಮಾತ್ರ ಪಾಸಾಗಿರುತ್ತಾರೆಂದು ನಮ್ಮ ಗಮನಕ್ಕೆ ಬಂದಿದೆ. ಆ ಕಾಲೇಜಿನ ಪ್ರಾಧ್ಯಾಪಕರೇ ಆ ಪ್ರಶ್ನೆ ಪತ್ರಿಕೆಗಳನ್ನು ರಚಿಸಿದವರಾಗಿರುವುದರಿಂದ ಈ ಕುಕೃತ್ಯ ನಡೆದಿರುತ್ತದೆ. ಆದುದರಿಂದ ಸರ್ಕಾರ ಅನ್ಯಾಯಕ್ಕೆ ಒಳಪಟ್ಟ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಲು ಕ್ರಮ ಕೈಕೊಳ್ಳಬೇಕಾಗಿ ವಿನಂತಿ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ಸಚಿವರು).—ಮಾನ್ಯ ಉನ್ನತ ಶಿಕ್ಷಣ ಸಚಿವರ ಪರವಾಗಿ ಕಾರ್ಕಳ ಭುವನೇಂದ್ರ ಕಾಲೇಜಿನಲ್ಲಿ ಕೊನೆಯ ಬಿ.ಕಾಂ. ತರಗತಿಯ ಕಾಸ್ಟಿಂಗ್ ಮತ್ತು ಇನ್‌ಕಮ್‌ಟ್ಯಾಕ್ಸ್ ಪರೀಕ್ಷೆಯ ಪ್ರಶ್ನೆ ಪತ್ರಗಳು ಪರೀಕ್ಷೆಯ ಮುನ್ನ ಹೊರಗಡೆವಿದ ವಿಷಯವು ವಿಶ್ವವಿದ್ಯಾನಿಲಯದ ಸಿಂಡಿಕೇಟಿನ ಅವಗಾಹನೆಗೆ ತರಲಾಗಿತ್ತು. ಸಿಂಡಿಕೇಟಿನ ಆದೇಶದ ಮೇರೆಗೆ ವಿಶ್ವವಿದ್ಯಾನಿಲಯದ ಮೌಲ್ಯ ಮಾಪನ ಕುಲ ಸಚಿವರು ಸದರಿ ವಿಷಯದ ಮೇಲೆ ತನಿಖೆ ನಡೆಸಿ ತಮ್ಮ ವರದಿಯನ್ನು ಒಪ್ಪಿಸಿರುವರು. ಈ ವರದಿಯನ್ನು ಇದೇ ತಿಂಗಳ ೭ ರಂದು ಸಿಂಡಿಕೇಟಿನ ವಿಶೇಷ ಸಭೆಯ ಮುಂದೆ ಪರಿಶೀಲನೆ ಮತ್ತು ಸೂಕ್ತ ಕ್ರಮಗಳಿಗಾಗಿ ಮಂಡಿಸಲಾಗುವುದು ಎಂದು ಮಂಗಳೂರು ವಿಶ್ವವಿದ್ಯಾನಿಲಯದ ಕುಲ ಸಚಿವರು ವರದಿ ಮಾಡಿರುತ್ತಾರೆ.